

## ಬಿಕ್ಕಳಿಸಿದರೆ ಭಯವಿಲ್ಲ

ಈ ಕಡಲು ಈ ತೀರ
ಈ ಕುರ್ಚಿ ಈ ನೀರ ಹರಹು
ನೀಡುತ್ತಿವೆ ಜೊತೆಗೆ ನಾವಿದ್ದೇವೆ
ಎಂಬ ಭರಪೂರ ಭರವಸೆ

ಇಲ್ಲಿ ಬಿಕ್ಕಳಿಸಿದರೆ ಭಯವಿಲ್ಲ
ಕೇಳದಂತೆ ಅಲೆಗಳಿವೆ ಅಬ್ಬರಿಸಲು
ಅಲೆಗಳು ಉಕ್ಕಿಸುವ ನೀರಹನಿಗಳು
ಸುರಿವ ಕಂಬನಿಯ ಮರೆಮಾಚುವವು

ನೀರಸದ್ದಿನ ಸಂಗೀತವಿದೆ ಇಲ್ಲಿ
ಮನಭಾರ ಮರೆಸಿ ಸಂತೈಸಲು
ಕಾಯುತ್ತಿದೆ ವರ್ತಮಾನ ಅನಿವಾರ್ಯ
ಗೊತ್ತಿದ್ದರೂ ಗೆಳೆಯಾ ಇಲ್ಲಿ ಹೆಜ್ಜೆ ಹಗುರ

ಹಂಚಿಕೊಳ್ಳುವೆ ಒಂಟಿಕಡಲೊಂದಿಗೆ
ನನ್ನ ಏಕಾಂಗಿತನವನ್ನು
ತುಂಬುಕೊಡುವೆ ಕಾಯುತಿರುವ
ಖಾಲಿ ಕುರ್ಚಿಗೆ ನನ್ನಿರುವನ್ನು

● ನಿರ್ಮಲಾ ವೀರಣ್ಣ

## ಗೈರು ಹಾಜರಿ

ಇಳಿ ಸಂಜೆ
ಸೂರ್ಯ ಸಾಯುವ ಹೊತ್ತು
ಕಾದಿದ್ದೆ ನಾನಲ್ಲಿ
ನಿನ್ನ ಗೈರು ಹಾಜರಿಯಲ್ಲಿ.

ಅಲೆಗಳ ಅಬ್ಬರ ಅಲ್ಲಿರಲಿಲ್ಲ,
ಸೂಸುವ ಗಾಳಿಯಲ್ಲೂ
ನಿನ್ನ ಘಮಲು ಇರಲ್ಲಿಲ್ಲ,
ಅಲ್ಲಿ ಶೂನ್ಯದಲ್ಲಿ ನಾನು ಲೀನನಾಗಿದ್ದೆ.

ಒಂಟಿ ಕುರ್ಚಿ
ಪಿಳಿಪಿಳಿ ಕಣ್ಬಿಟ್ಟು ಕಾದಿತ್ತು
ನಿನ್ನ ಆಗಮನಕ್ಕಾಗಿ,
ಸೋತು ಕೈಚಲ್ಲಿ ಕುಂತಿತ್ತು
ಬೇಸರದಿ ಮೌನವಾಗಿ.

ನಿರ್ಜೀವ ಸೇತುವೆಯ ಮೇಲೆ
ಸಜೀವ ಭಾವವೊಂದು
ಅಮೂರ್ತ ರೂಪತಾಳಿ
ಕಾಯುತ್ತಿದೆ ನಿನ್ನ ಹಾಜರಿಗಾಗಿ.

● ಯೂನುಸ್ ಸಾರವಾನ್